ಕಾಯ್ದುಕೊಳ್ಳುವಿರಿ? ಎಂಬುದರ ಮೇಲೆ ಯಶಸ್ಸು ಅವಲಂಬಿತ. ನನಗೆ ಮೊದಲು ತಾಂತ್ರಿಕ ವಿಷಯಗಳ ಕುರಿತು ಅರಿವೇ ಇರಲಿಲ್ಲ. ಚಾನಲ್ ಮಾನಿಟೈಸ್ ಮಾಡುವ ಸಂಗತಿಯೂ ತಿಳಿದಿರಲಿಲ್ಲ. ಯೂಟ್ಯೂಬ್, ನಮ್ಮ ಬೆಳವಣಿಗೆಗೆ ಇರುವ ವೇದಿಕೆ ಎಂದಷ್ಟೇ ನಾನು ಭಾವಿಸಿದ್ದೆ. ಆದರೆ ಈಗ ಬರುವವರು ಚಾನಲ್ ತೆರೆಯುತ್ತಲೇ ಮಾನಿಟೈಸ್ ಬಗ್ಗೆ ಮಾಹಿತಿ ಪಡೆದುಕೊಂಡಿರುತ್ತಾರೆ. ಕನ್ನಡದಲ್ಲಿ ಬೆಳೆಯಲು ಹೆಚ್ಚು ಅವಕಾಶಗಳಿವೆ. ಕೆಲವೇ ವರ್ಷಗಳ ಕನ್ನಡ ಡಿಜಿಟಲ್ ಜಗತ್ತಿನಲ್ಲಿ ಯೂಟ್ಯೂಬರ್‌ಗಳ ಕಡಿಮೆಯಿತ್ತು. ಈಗ ಸಂಖ್ಯೆ ಹೆಚ್ಚಾಗಿದೆ. ಬೇರೆ ಬೇರೆ ಜಾನರ್‌ಗಳಲ್ಲಿ ಹಲವು ಪ್ರಯೋಗಗಳು ನಡೆಯುತ್ತಿವೆ' ಎನ್ನುತ್ತಾರೆ ಅವರು.

ಕಳೆದ ಎರಡು ವರ್ಷಗಳಿಂದೀಚೆ ಯೂಟ್ಯೂಬ್ ಚಾನಲ್‌ಗಳು ಹೆಚ್ಚಳವಾಗಲು ಕಾರಣವೇನಿರಬಹುದು? ಯೂಟ್ಯೂಬ್ ಬಳಸುವವರ ಸಂಖ್ಯೆಗೂ ಕೊರೊನಾ ಲಾಕ್‌ಡೌನ್‌ಗೂ ಸಂಬಂಧವಿದೆಯೇ? ಎಂಬ ಪ್ರಶ್ನೆಗೆ 'ಇದೆ' ಎನ್ನುವುದು ಎರಡು ವರ್ಷಗಳ ಹಿಂದಷ್ಟೇ 'ಫಸ್ಟ್ ಡೇ ಫಸ್ಟ್ ಶೋ ಕನ್ನಡ' (https://bit.ly/3HJtCw5) ಸಿನಿಮಾ ಯೂಟ್ಯೂಬ್ ಚಾನಲ್ ಆರಂಭಿಸಿರುವ ನವೀನ್ ಅವರ ಉತ್ತರ.



ನವೀನ್

'ಕೊರೊನಾ ಲಾಕ್‌ಡೌನ್ ಸಂದರ್ಭ ಜನ ಡಿಜಿಟಲ್ ಮಾಧ್ಯಮಗಳೆಡೆಗೆ ಹೆಚ್ಚು ವಾಲಿದರು. ಆ ಸಂದರ್ಭವೇ ಯೂಟ್ಯೂಬ್ ಚಾನಲ್‌ಗಳು ಅಧಿಕವಾಗಲು ಕಾರಣವಾಯಿತು. ನಾನು ಕೂಡ 2020ರಲ್ಲಿ ಸಿನಿಮಾಗೆ ಸಂಬಂಧಿಸಿದಂತೆ ಯೂಟ್ಯೂಬ್ ಚಾನಲ್ ಆರಂಭಿಸಿದೆ' ಎನ್ನುತ್ತಾರೆ ಅವರು.

ಮಾಧ್ಯಮ ಕಂಪನಿಗಳಲ್ಲಿ ಕೆಲಸ ಮಾಡಿ ಅನುಭವವಿದ್ದ ನವೀನ್ ಅವರಲ್ಲಿ ಸ್ವಂತ ದುಡಿಮೆಯ ಆಲೋಚನೆ ಇತ್ತು. ವೃತ್ತಿಯಲ್ಲಿನ ತೊಡಕುಗಳು ಈ ಆಲೋಚನೆಯನ್ನು ಇನ್ನಷ್ಟು ಗಟ್ಟಿಗೊಳಿಸಿತ್ತು. ದುಡಿಮೆಗೆ ಯೂಟ್ಯೂಬ್ ಉತ್ತಮ ವೇದಿಕೆಯಾಗುವ ನಿರೀಕ್ಷೆ ಅವರಲ್ಲಿ ಹುಟ್ಟಿಕೊಂಡಿತ್ತು. ಕನ್ನಡ ಸಿನಿಮಾ ಸುದ್ದಿ, ವಿಶೇಷ ಸಂದರ್ಶನಗಳನ್ನು ಹೊರತರುವ ಆಲೋಚನೆಯೊಂದಿಗೆ ಯೂಟ್ಯೂಬ್ ಚಾನಲ್‌ಗಳ ಕುರಿತು ಮಾಹಿತಿ ಕಲೆ ಹಾಕಲು ಆರಂಭಿಸಿದ್ದರು. ಯೂಟ್ಯೂಬ್ ಕಾರ್ಯವೈಖರಿ, ಯಶಸ್ವಿ ಯೂಟ್ಯೂಬರ್‌ಗಳ ಅನುಭವ ಎಲ್ಲದರ ಕುರಿತು ತಿಳಿದುಕೊಳ್ಳುವ ಪ್ರಯತ್ನ ಮುಂದುವರೆಸಿದರು. ಅಂತೂ ಪ್ರಯೋಗಕ್ಕೆ ಕಾಲಿಟ್ಟರು.

ಕೊರೊನಾ ಇದ್ದ ಕಾರಣ ಮನೆಯಲ್ಲಿಯೇ ವಾಯ್ಸ್ ಓವರ್ ಸೇರಿಸಿ ವಿಡಿಯೊ ಹಾಕಿದರು. ಏಳೆಂಟು ತಿಂಗಳ ಕಾಲ ಯಾವುದೇ ಬೆಳವಣಿಗೆ ಕಾಣಲಿಲ್ಲ. ಭಿನ್ನ ಧಾಟಿಯ ಕಂಟೆಂಟ್ ಕಡೆ ಗಮನ ಹರಿಸಿದರು. ಸಿನಿಮಾ ವಿಶ್ಲೇಷಣೆಗಳು ಜನರಿಗೆ ಹತ್ತಿರವಾದಂತೆನಿಸಿದವು. ಚಾನಲ್‌ನ ಚಂದಾದಾರರ ಸಂಖ್ಯೆ ನಿಧಾನವಾಗಿ ಒಂದು ಸಾವಿರದ ಅಂಚಿಗೆ ಬಂದಿತ್ತು. ಆದರೆ ಏರುಪೇರು ಮುಂದುವರೆದಿತ್ತು. ಇದೀಗ ಒಂದು ಲಕ್ಷದತ್ತ ಚಂದಾದಾರರ ಸಂಖ್ಯೆ ಸಾಗುತ್ತಿದ್ದು, ಗಳಿಕೆಯೂ ಗಮನಾರ್ಹವಾಗಿದೆ.

'ಪ್ರಾರಂಭದಲ್ಲಿ ಮತ್ತೆ ಮತ್ತೆ ನಿರಾಸೆ ಎದುರಾಯಿತು. ಅಂದುಕೊಂಡಷ್ಟು ಜನ ವಿಡಿಯೊ ವೀಕ್ಷಣೆ ಮಾಡುತ್ತಿರಲಿಲ್ಲ. ಆದರೂ ಪ್ರಯತ್ನ ಮುಂದುವರೆಸಿದೆ. ಯೂಟ್ಯೂಬ್ ಚಾನಲ್ ಆರಂಭಕ್ಕೆ ಮುನ್ನ ನಮ್ಮ ವಿಷಯದ ಕುರಿತು ಸ್ಪಷ್ಟತೆ ಇರಬೇಕು. ಯೂಟ್ಯೂಬ್ ಚಾನಲ್ ಅಂಗಡಿಯಿದ್ದಂತೆ. ಬೇಕರಿ ತೆರೆದಿದ್ದರೆ

# ಕೆಲವು ಜನಪ್ರಿಯ ಯೂಟ್ಯೂಬ್ ಚಾನಲ್‌ಗಳು



'ಡಾ ಬ್ರೋ' ಯೂಟ್ಯೂಬ್ ಚಾನಲ್‌ನ ಗಗನ್

## ಡಾ ಬ್ರೊ ಕನ್ನಡ

'ನಮಸ್ಕಾರ ದೇವ್ರು' ಅನ್ನುತ್ತಲೇ ಮಾತು ಆರಂಭಿಸುವ 22ರ ಯುವಕ ಗಗನ್ ಶ್ರೀನಿವಾಸ್ ದೇಶ ವಿದೇಶಗಳನ್ನು ಸುತ್ತುತ್ತಾ ಕನ್ನಡಿಗರಿಗೆ ಹೊಸ ಹೊಸ ಸ್ಥಳಗಳನ್ನು ಪರಿಚಯಿಸುವ ಯೂಟ್ಯೂಬ್ ಚಾನಲ್ ನಡೆಸುತ್ತಿದ್ದಾರೆ. ಎರಡು ವರ್ಷಗಳಿಂದ ಸಾಕಷ್ಟು ಸ್ಥಳಗಳ ಪರಿಚಯ ಮಾಡಿಕೊಟ್ಟು, ಟ್ರಾವೆಲ್ ವ್ಲಾಗರ್ ಎಂದೇ ಕರೆಸಿಕೊಂಡಿದ್ದಾರೆ. ಅಪರೂಪದ, ಖ್ಯಾತ ಪ್ರವಾಸಿ ಸ್ಥಳಗಳನ್ನು ಕನ್ನಡಿಗರಿಗೆ ತೋರುತ್ತಿರುವುದು ಗಗನ್ ಅವರ ಒಂದು ವೈಶಿಷ್ಟ್ಯ. ಅವರ ಮಾತಿನ ಶೈಲಿಯೂ ಈ ಚಾನಲ್ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದೆ. ತಮ್ಮ ಚಾನಲ್‌ಗೆ 'ಡಾ ಬ್ರೊ' (https://bit.ly/3tXviwd) ಎಂದು ಭಿನ್ನವಾಗಿ ನಾಮಕರಣ ಮಾಡಿದ್ದಾರೆ. ಈ ಲೇಖನಕ್ಕಾಗಿ ಅವರನ್ನು ಸಂಪರ್ಕಿಸಿದಾಗ ಅವರು ಉರ್ಝುಕಿಸ್ತಾನದಲ್ಲಿದ್ದರು. 'ಡಾಕ್ಟರ್ ಮನುಷ್ಯನ ದೇಹದೊಳಗೆ ಎಕ್ಸ್‌ಪ್ಲೋರ್ ಮಾಡುತ್ತಾರೆ. ನಾನು ಹೊರಗೆ ಎಕ್ಸ್‌ಪ್ಲೋರ್ ಮಾಡಬೇಕು. ಇಡೀ ಜಗತ್ತನ್ನು ಸುತ್ತಿ ಕನ್ನಡದಲ್ಲೇ ಮಾತಾಡಿ ಕನ್ನಡಿಗರಿಗೆ ಎಲ್ಲಾ ಸ್ಥಳಗಳನ್ನು ತೋರಿಸಬೇಕು. ಆದಕ್ಕೆ ಈ ಹೆಸರಿಟ್ಟೆ' ಎನ್ನುತ್ತಾರೆ. ಮೊದಮೊದಲು ಕರ್ನಾಟಕದ ಹಲವು ಸ್ಥಳಗಳ ಪರಿಚಯದಿಂದ ಆರಂಭವಾದ ಅವರ ಯೂಟ್ಯೂಬ್ ಯಾನ